

# ‘ನಮಗೆ ಬ್ಯಾಂಕ್ ಸಾಲವೂ ಸಿಗಲ್ಲ

## ದಿವ್ಯಾ ಕಾರಂತ
### ಸಿರಿ ಕನ್ನಡ ‘ಯುಗಾಂತರ’ ಅರುಂಧತಿ

◆ **‘ಯುಗಾಂತರ’ ಅನಿರೀಕ್ಷಿತ ಅಂತ್ಯ ಆಯಿತು? ನಾಳೆ ಏನು?**

ಮತ್ತೆ ಹುಡುಕಾಟ. ಕಥೆ ಜಿಲ್ಲಾಧಿಕಾರಿ ಅರುಂಧತಿಯಿಂದಲೇ ಶುರುವಾಗುತ್ತೆ. ಅಂತ್ಯವೂ ಅವಳಿಂದಲೇ ಆಗುತ್ತದೆ. ಐಎಎಸ್ ಅಧಿಕಾರಿಯ ಪಾತ್ರವನ್ನು ಮೊದಲ ಬಾರಿಗೆ ಮಾಡಿದ್ದೇನೆ. ಅನಿರೀಕ್ಷಿತ ಅಂತ್ಯ ಆಯ್ತು ಎಂದು ಕೆಲವರಿಗೆ ಅನಿಸಿರಬಹುದು. ನಿರ್ದೇಶಕ ಸೇತುರಾಮ್ ಆರಂಭದಲ್ಲೇ ಒಂದು ವರ್ಷದ ಮಿತಿ ಹೇಳಿದ್ದರು. ಬರ್ತಾ ಬರ್ತಾ ಕಥೆ ವಿಸ್ತಾರ ಆಯಿತು. ಪಾತ್ರಗಳು ಬೆಳೆಯುತ್ತಾ ಹೋದವು. ಶುರುವು ಹೀಗೆ ಆಗುತ್ತದೆ, ಮುಕ್ತಾಯ ಹೀಗೆಯೇ ಆಗುತ್ತದೆ ಎಂದು ಊಹೆ ಮಾಡಲು ಆಗುವುದಿಲ್ಲ. ಕಥೆಗೆ ನ್ಯಾಯ ಕೊಟ್ಟಿದ್ದಾರೆ ಎಂದು ಅನ್ನಿಸಿದೆ. ಮುಗಿಯುತ್ತದೆ ಎಂದು ಬಹುತೇಕರು ಅಂದುಕೊಂಡಿರಲಿಲ್ಲ.

◆ **ಕಲಾ ಜೀವನ ಆರಂಭ ಹೇಗೆ ಆಯಿತು?**

ವೃತ್ತಿ ಆರಂಭ ಆಗಿದ್ದು ರೇಡಿಯೊ ಜಾಕಿ ಆಗಿ. ಮಂಗಳೂರಿನಲ್ಲಿ ಮಾಡುತ್ತಿದ್ದವಳು ಬೆಂಗಳೂರಿಗೆ ವರ್ಗಾವಣೆ ಆಗಿ ಬಂದೆ. ಶಾಲೆಯ ದಿನಗಳಲ್ಲಿ ಡಾನ್ಸ್, ನಾಟಕಗಳಲ್ಲಿ ಚುರುಕಾಗಿ ಇರುತ್ತಿದ್ದೆ. ಆದರೆ ಅದನ್ನು ವೃತ್ತಿಪರವಾಗಿ ಯಾವತ್ತೂ ಮಾಡಿರಲಿಲ್ಲ. ಕೊಪ್ಪ ತಾಲ್ಲೂಕು ಬಸಿರಿಕಟ್ಟೆ ಮೂಲದವಳು ನಾನು. ತಂದೆಯ ಅಪ್ಪ–ಅಮ್ಮ, ತಾಯಿಯ ಅಪ್ಪ–ಅಮ್ಮ ದಕ್ಷಿಣ ಕನ್ನಡದವರು. ಮಲೆನಾಡಿನಲ್ಲಿ ಬೆಳೆದ ನನಗೆ ರಂಗಚಟುವಟಿಕೆಗೆ ಅಷ್ಟು ಅವಕಾಶ ಇರಲಿಲ್ಲ. ಯಕ್ಷಗಾನ ಕಲಿಯಬಹುದಿತ್ತಷ್ಟೆ. ಬೆಂಗಳೂರಿಗೆ ಬಂದ ಮೇಲೆ ‘ನಮ್ಮೊಳಗೊಬ್ಬ ನಾಜೂಕಯ್ಯ’ ನಾಟಕಕ್ಕೆ ಮೊದಲು ಬಣ್ಣ ಹಚ್ಚಿದೆ. ಅದಾದ ಮೇಲೆ ‘ಮಹಾಪರ್ವ’ದಲ್ಲಿ ಪ್ರಮುಖ ಪಾತ್ರ ಮಾಡಿದೆ. ಒಂದೆರಡು ಸಿನಿಮಾ ಮಾಡಿದೆ. ಹೀಗೆ ವೃತ್ತಿ ಆರಂಭವಾಯಿತು. ಇದೆಲ್ಲ ಬೇಡ ಎಂದು ಅನ್ನಿಸಿ 5 ವರ್ಷ ಅಭಿನಯದಿಂದ ದೂರ ಇದ್ದೆ. ‘ಯುಗಾಂತರ’ ಮೂಲಕ ಮರಳಿ ಬಂದೆ.

◆ **ಏನು ಮಾಡಬೇಕು ಎನ್ನುವ ಆಸೆ ನಿಮಗಿತ್ತು?**

ಕ್ರೈಮ್ ವರದಿಗಾರ್ತಿ ಆಗಬೇಕು ಎಂದು ಪ್ರೌಢಶಾಲೆಯಲ್ಲಿ ಅಂದುಕೊಂಡಿದ್ದೆ. ಆ ನಿಟ್ಟಿನ ಪ್ರಯತ್ನವನ್ನು ಮಾಡಲಿಲ್ಲ. ಅದನ್ನು ಬಿಟ್ಟು ಸಾಹಿತ್ಯ–ಮನರಂಜನೆ ಕಡೆಗೆ ಒಲವು ಮೂಡಿತು. ಅದು ಹೇಗೆ ಅಂತ ಗೊತ್ತಿಲ್ಲ. ಒಂದು ಒಳ್ಳೆಯ ಕೆಲಸ ಮಾಡಿಕೊಂಡು ಇರುವುದಲ್ಲವೇ ಎಂದು ನಮ್ಮ ಅಮ್ಮ ಬೈಯುತ್ತಿರುತ್ತಾರೆ. ಆ ರೀತಿಯ ಪ್ರಯತ್ನವನ್ನೂ ಮಾಡಿದ್ದೇನೆ. ಬೆಳಿಗ್ಗೆ 9ರಿಂದ ಸಂಜೆ 5ರ ಕೆಲಸ ನನಗೆ ಸೆಟ್ ಆಗಿಲ್ಲ. ನಟನೆ ಇಲ್ಲದಿದ್ದರೆ ಬರೆಯುತ್ತಿದ್ದೆ. ಬರಹದ ಕಡೆ ಒಲವಿದೆ. ‘ಮಿಂಚು ಮತ್ತು ಮಳೆ’ ಎನ್ನುವ ಕಥಾ ಸಂಕಲನವನ್ನು ಪ್ರಕಟಿಸಿದ್ದೇನೆ. ನಾಲ್ಕು ನಾಟಕ ಬರೆದಿದ್ದೇನೆ. ನಾನೇ ನಿರ್ದೇಶನವನ್ನೂ ಮಾಡಿದ್ದೇನೆ. ‘ಸೀಮಾ’ ಕಿರುಚಿತ್ರವನ್ನೂ ಬರೆದು ನಿರ್ದೇಶನ ಮಾಡಿದ್ದೇನೆ. ನಮ್ಮದೇ ಯೂಟ್ಯೂಬ್ ಸೀರೀಸ್ ಮಾಡಿದ್ದೇನೆ. ನಟ ಶಿವರಾಜ್ ಕುಮಾರ್ ಜೊತೆ ‘ಘೋಸ್ಟ್’ ಸಿನಿಮಾ ಮಾಡಿದ್ದೇನೆ. ಪ್ಲಾನ್ ಮಾಡಿದ್ದು ವರ್ಕ್ ಆಗಲ್ಲ ಅಂತ ಗೊತ್ತಾಗಿದೆ. ಸಮಯ ಹೇಗೆ ಬರುತ್ತದೆ ಎಂದು ನೋಡಬೇಕು.

◆ **ಡ್ರಾಮಾ– ಸೀರಿಯಲ್– ಸಿನಿಮಾ ಒಂದಕ್ಕೊಂದು ಎಷ್ಟು ಪೂರಕ ಆಗುತ್ತವೆ?**

ಕಿರುತೆರೆ, ಬೆಳ್ಳಿತೆರೆ, ರಂಗಭೂಮಿ ಮೂರೂ ವಿಭಿನ್ನ ಸ್ವರೂಪಗಳು. ನಟನೆ ಬರುತ್ತದೆ ಎಂದು ಆ ಮೂರರಲ್ಲೂ ಮಾಡಲು ಆಗುವುದಿಲ್ಲ. ಆಯಾ ಕ್ಷೇತ್ರದ ಕಲಿಕೆ ಬೇರೆನೇ ಇರುತ್ತದೆ. ಕಿರುತೆರೆಯಲ್ಲಿ ವರ್ಷಗಟ್ಟಲೇ ಒಂದೇ ಪಾತ್ರ ಮಾಡುವುದರಿಂದ ಪಾತ್ರದ ಬೆಳವಣಿಗೆಗೆ ಪೂರಕವಾಗಿ ಯೋಚನೆ ಮಾಡುತ್ತೇವೆ. ಅದು ವರವೂ ಹೌದು ಶಾಪವೂ ಹೌದು. ಕೆಲವೊಮ್ಮೆ ಏಕತಾನತೆ ಕಾಡಬಹುದು. ಸಿನಿಮಾ ಮತ್ತು ರಂಗಭೂಮಿ ಹಾಗಲ್ಲ. ಪ್ರತಿ ಸಿನಿಮಾದಲ್ಲೂ ಪಾತ್ರಗಳು ಬದಲಾಗುತ್ತವೆ. ಸಿದ್ಧತೆಗೆ ಅಲ್ಲಿ ಅವಕಾಶ ಇರುತ್ತದೆ. ಅದೇ ಅನುಭವ ಬೇರೆ. ನಾಟಕದಲ್ಲಿ ಈ ಎಲ್ಲದಕ್ಕಿಂತ ಭಿನ್ನ. ವೇದಿಕೆ ದೊಡ್ಡದು, ನಟರು ಚಿಕ್ಕವರಾಗುತ್ತಾರೆ. ನಟರ ಧ್ವನಿ ದೊಡ್ಡದಾಗಿರಬೇಕು. ನನಗೆ ಸಿನಿಮಾ ಮತ್ತು ರಂಗಭೂಮಿ ಇಷ್ಟ ಏಕೆಂದರೆ ಪ್ರಯೋಗಕ್ಕೆ ಇಲ್ಲಿ ಅವಕಾಶ ಹೆಚ್ಚು.

◆ **ಒತ್ತಡದಲ್ಲಿ ಕೆಲಸ ಮಾಡುತ್ತಿದ್ದವರು ಧಾರಾವಾಹಿ ಮುಗಿದ ತಕ್ಷಣ ಖಾಲಿ ಖಾಲಿ ಅನ್ನಿಸುವುದಿಲ್ಲವೇ?**

ನಿಜ. ನನಗೆ ಒಬ್ಬರು ‘ಈ ಕ್ಷೇತ್ರದಲ್ಲಿ ಎಷ್ಟೊಂದು ಹೋರಾಟ ಮಾಡಬೇಕು ಆದರೂ ಇಲ್ಲೇ ಇದ್ದೀರಲ್ಲ ಏಕೆ’ ಎಂದು ಕೇಳಿದ್ದರು. ಕರ್ನಾಟಕ ಚಲನಚಿತ್ರ ಅಕಾಡೆಮಿಯಲ್ಲಿ ಒಳ್ಳೆಯ ಕೆಲಸವೂ ನನಗೆ ಸಿಕ್ಕಿತ್ತು. ಅದನ್ನು ಮಾಡಲು ಆಗಲಿಲ್ಲ. ಹುಚ್ಚು ಅಂತೀರೋ ಏನೋ ಗೊತ್ತಿಲ್ಲ. ಆ ಕೆಲಸ ಬಿಟ್ಟು ಮನೆಮಂದಿ ಕಡೆಯಿಂದ ಬೈಸಿಕೊಂಡಿದ್ದೇನೆ. ಯಾವುದೇ ಪ್ರಾಜೆಕ್ಟ್ ಮುಗಿದ ತಕ್ಷಣ ಮತ್ತೊಂದಕ್ಕೆ ಹುಡುಕಾಟ ಇರುತ್ತದೆ. ತಿಂಗಳಿಗೆ ಲಕ್ಷ ಸಂಪಾದಿಸಿದರೂ ಬ್ಯಾಂಕ್ ಸಾಲ ಸಿಗಲ್ಲ. ಏಕೆಂದರೆ ನಮಗೆ ಸಂಬಳದ ಚೀಟಿ ಇರಲ್ಲ. ಆದರೆ ಏನೋ ಖುಷಿ ಸಿಗುತ್ತೆ, ನೆಮ್ಮದಿಯ ನಿದ್ದೆ ಬರುತ್ತೆ ಅಂತ ಇದನ್ನೇ ಆಯ್ಕೆ ಮಾಡಿಕೊಂಡೆ. ದುಡ್ಡು ಇಲ್ಲದಿದ್ದರೂ ನಾನು ಇಷ್ಟಪಡುವುದನ್ನು ಮಾಡಿದೆ ಎನ್ನುವ ಸಮಾಧಾನ ಇರುತ್ತದೆ. ಬರವಣಿಗೆ ಮತ್ತು ರಂಗಭೂಮಿ ಕೆಲಸ ಮಾಡುವುದರಿಂದ ಖಾಲಿಯಂತೂ ಇರಲ್ಲ. ಜೊತೆಗೆ ಓದುವ ಅಭ್ಯಾಸ ಇರುವುದರಿಂದ ಬಿಡುವಾಗಿದ್ದೇನೆ ಎಂದು ಅನಿಸುವುದಿಲ್ಲ.

■ **ರಾಘವೇಂದ್ರ ಕೆ.**